**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಛೇರಿ, ಉತ್ತರಕನ್ನಡ, ಕಾರವಾರ**

**ಅಧಿಸೂಚನೆ ಸಂಖ್ಯೆ: 1/2026**

**ದಿನಾಂಕಃ 05 ನೇ ಆಗಸ್ಟ ಮಾಹೆ 2026**

**ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಆರಂಭದ ದಿನಾಂಕಃ 17.08.2026**

**ಕೊನೆಯ ದಿನಾಂಕಃ 16.09.2026 ರ ರಾತ್ರಿ 11.59 ಗಂಟೆಯವರೆಗೆ**

**ಭಾರತೀಯ ಸ್ಟೇಟ್ ಬ್ಯಾಂಕ್ ಚಲನ್ ಮುಖಾಂತರ ಶುಲ್ಕ ಪಾವತಿಸಲು ಕಡೆಯ ದಿನಾಂಕಃ 17.09.2026**

*****

ವಿಷಯಃ ಆದೇಶ–ಜಾರಿಕಾರ ಹಾಗೂ ಜವಾನ ಹುದ್ದೆಗಳ ನೇಮಕಾತಿ ಬಗ್ಗೆ.

ಉಲ್ಲೇಖಃ 1.ಮಾನ್ಯ ಉಚ್ಛ ನ್ಯಾಯಾಲಯ,ಬೆಂಗಳೂರು ಇವರ ಪತ್ರ ಕ್ರಮಸಂಖ್ಯೆ:ಡಿ.ಜೆ..ಎ./712/2025,ದಿನಾಂಕಃ 09.02.2026.

2.ಮಾನ್ಯ ಉಚ್ಛ ನ್ಯಾಯಾಲಯ,ಬೆಂಗಳೂರು ಇವರ ಪತ್ರ ಕ್ರಮಸಂಖ್ಯೆ:ಡಿ.ಜೆ..ಎ–II(ಎಲ್.ಸಿ.ಎ.–II)128/2012, ದಿನಾಂಕಃ 11.09.2023.

3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ:2/2022 , ದಿನಾಂಕಃ 28.04.2022 ಹಾಗೂ ಸಂಖ್ಯೆ:3/2024 , ದಿನಾಂಕಃ 14.06.2024.

4. ಮಾನ್ಯ ಉಚ್ಛ ನ್ಯಾಯಾಲಯ,ಬೆಂಗಳೂರು ಇವರ ಪತ್ರ ಕ್ರಮಸಂಖ್ಯೆ:ಡಿ.ಜೆ..ಎ./400/2021,ದಿನಾಂಕಃ 06.06.2026.

5.ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸ.ಕ.ಇ.–515–ಪಕವಿ–2026 ಬೆಂಗಳೂರು, ದಿನಾಂಕಃ08.05.2026.

6.ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ–02–ಸೇಹಿಮ 2026, ಬೆಂಗಳೂರು ದಿನಾಂಕಃ13.05.2026.

7.ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ–08–ಸೇನಿಮ 1995, ಬೆಂಗಳೂರು ದಿನಾಂಕಃ20.06.1995.

8.ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ–02–

ಸೇಹಿಮ 2023, ಬೆಂಗಳೂರು ದಿನಾಂಕಃ08.03.2023.

9.ಕರ್ನಾಟಕ ಸರ್ಕಾರದ ಗೆಜೆಟ್ ನೊಟೀಫಿಕೇಶನ್ ಸಂಖ್ಯೆಃ ಡಿಪಿಎಆರ್ 179/ಎಸ್ಆರಎಲ್.2020,ಬೆಂಗಳೂರು,ದಿನಾಂಕಃ06.07.2021.

*******

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉತ್ತರಕನ್ನಡ, ಕಾರವಾರ ಘಟಕದ ವಿವಿಧ ನ್ಯಾಯಾಲಯಗಳಲ್ಲಿ ಕೆಳಗೆ ವಿವರಿಸಿರುವಂತೆ ಖಾಲಿ ಇರುವ ಆದೇಶ-ಜಾರಿಕಾರರು (PROCESS-SERVER) ಹಾಗೂ ಜವಾನ (PEON) ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿತಕ್ಕದ್ದು.

ಅರ್ಜಿಗಳನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉತ್ತರಕನ್ನಡ, ಕಾರವಾರದ ವೆಬ್‌ಸೈಟ್ https://uttarakannada.dcourts.gov.in/notice-category/recruitments/ ಅಥವಾ https://uttarakannada.dcourts.gov.in/online-recruitment/ ನಲ್ಲಿ ನೀಡಲಾದ ಲಿಂಕ್ ಮೂಲಕ ಅನ್‌ಲೈನ್ ನಲ್ಲಿ **ದಿನಾಂಕಃ17.08.2026 ರಿಂದ ದಿನಾಂಕಃ 16.09.2026 ರ ರಾತ್ರಿ 11.59 ರವರೆಗೆ** ಮಾತ್ರ ಸಲ್ಲಿಸತಕ್ಕದ್ದು.

**<u>ರಿಕ್ತ ಸ್ಥಾನಗಳ ವಿವರಃ -</u>**

**<u>ಆದೇಶ ಜಾರಿಕಾರರು - 13 ಹುದ್ದೆಗಳು</u>**

| ಕ್ರಮ ಸಂಖ್ಯೆ | ಪ್ರವರ್ಗ | ಮೀಸಲು ರಹಿತ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಎದ್ದುಕಾಣುವ ಅಂಗವೈಕಲ್ಯ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತ ಅಭ್ಯರ್ಥಿ | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಸಾಮಾನ್ಯ ಅಭ್ಯರ್ಥಿ | - | 3 | 1 | - | 1 | 1 | - | - | **6** |
| 2 | ಪ್ರ.ಜಾ. (ಪ್ರವರ್ಗ-ಎ) | 1 | - | - | - | - | - | - | - | **1** |

| | | | | | | | | | | |
|---|---|---|---|---|---|---|---|---|---|---|
| 3 | ಪ.ಜಾ. (ಪ್ರವರ್ಗ–ಬಿ) | 1 | – | – | – | – | – | – | – | **1** |
| 4 | ಪ.ಜಾ. (ಪ್ರವರ್ಗ–ಸಿ) | 1 | – | – | – | – | – | – | – | **1** |
| 5 | ಪರಿಶಿಷ್ಟ ಪಂಗಡ | – | – | – | – | – | – | – | – | **–** |
| 6 | ಪ್ರವರ್ಗ–I | – | 1 | – | – | – | – | – | – | **1** |
| 7 | ಪ್ರವರ್ಗ–IIA | – | 1 | 1 | 1* | – | – | – | – | **3** |
| 8 | ಪ್ರವರ್ಗ–IIB | – | – | – | – | – | – | – | – | **–** |
| 9 | ಪ್ರವರ್ಗ–IIIA | – | – | – | – | – | – | – | – | **–** |
| 10 | ಪ್ರವರ್ಗ–IIIB | – | – | – | – | – | – | – | – | **–** |
| | **ಒಟ್ಟು** | **3** | **5** | **2** | **1** | **1** | **1** | **–** | **–** | **13** |

4 ನೇ ಬಿಂದು – * ಅಂಧ ಮತ್ತು ದೃಷ್ಟಿ ಮಾಂದ್ಯ

## **ಜವಾನ – 65 ಹುದ್ದೆಗಳು**

| **ಕ್ರಮ ಸಂಖ್ಯೆ** | **ಪ್ರವರ್ಗ** | **ಮೀಸಲು ರಹಿತ** | **ಮಹಿಳಾ ಅಭ್ಯರ್ಥಿ** | **ಗ್ರಾಮೀಣ ಅಭ್ಯರ್ಥಿ** | **ಎದ್ದುಕಾಣುವ ಅಂಗವೈಕಲ್ಯ ಅಭ್ಯರ್ಥಿ** | **ಮಾಜಿ ಸೈನಿಕ** | **ಕನ್ನಡ ಮಾಧ್ಯಮ ಅಭ್ಯರ್ಥಿ** | **ಯೋಜನಾ ನಿರಾಶ್ರಿತ ಅಭ್ಯರ್ಥಿ** | **ತೃತೀಯ ಲಿಂಗ** | **ಒಟ್ಟು** |
|---|---|---|---|---|---|---|---|---|---|---|
| 1 | ಸಾಮಾನ್ಯ ಅಭ್ಯರ್ಥಿ | 5 | 11 | 8 | 1**+ 1*** | 3 | 1 | 1 | 1 | 32 |
| 2 | ಪ್ರ.ಜಾ. (ಪ್ರವರ್ಗ–ಎ) | 1 | 1 | 1 | 1* | – | – | – | – | 4 |
| 3 | ಪ.ಜಾ. (ಪ್ರವರ್ಗ–ಬಿ) | 1 | 1 | 1 | – | – | – | – | – | 3 |
| 4 | ಪ.ಜಾ. (ಪ್ರವರ್ಗ–ಸಿ) | 1# | 1 | 1 | – | – | – | – | – | 3 |

| | | | | | | | | | | |
|---|---|---|---|---|---|---|---|---|---|---|
| 5 | ಪರಿಶಿಷ್ಟ ಪಂಗಡ | 1 | 1 | – | – | – | – | – | – | 2 |
| 6 | ಪ್ರವರ್ಗ–I | 1 | 1 | 1 | – | – | – | – | – | 3 |
| 7 | ಪ್ರವರ್ಗ–IIA | 2 | 3 | 3 | 1 | 1 | – | – | – | 10 |
| 8 | ಪ್ರವರ್ಗ–IIB | 1 | 1 | 1 | – | – | – | – | – | 3 |
| 9 | ಪ್ರವರ್ಗ–IIIA | 1 | 1 | – | – | – | – | – | – | 2 |
| 10 | ಪ್ರವರ್ಗ–IIIB | 1 | 1 | 1 | – | – | – | – | – | 3 |
| | **ಒಟ್ಟು** | **15** | **22** | **17** | **4** | **4** | **1** | **1** | **1** | **65** |

4 ನೇ ಬಿಂದು – * ಅಂಧ ಮತ್ತು ದೃಷ್ಟಿಮಾಂಧ್ಯ

24 ನೇ ಬಂದು –* ಚಲನವಲನ ವೈಕಲ್ಯ –ಮೆದುಳಿನ ಪಾರ್ಶ್ವ ವಾಯು, ಕುಷ್ಟ ರೋಗ ನಿವಾರಿತ, ಕುಬ್ಜತೆ, ಆ್ಯಸಿಡ್ ದಾಳಿಗೆ ತುತ್ತಾದವರು ಮತ್ತು ಬಹುವಿಧ ಸ್ನಾಯು ಸೆಳೆತ ಒಳಗೊಂಡಂತೆ.

44 ನೇ ಬಿಂದು –*** ಶ್ರವಣಹೀನ ಮತ್ತು ಶ್ರವಣ ದೋಷ ಅಭ್ಯರ್ಥಿ

# – ಪ.ಜಾ (ಪ್ರವರ್ಗ–ಸಿ) ಅಡಿಯಲ್ಲಿ 59 ಅತ್ಯಂತ ಹಿಂದುಳಿದ ಜಾತಿಗಳು –ಲಭ್ಯವಾಗದಿದ್ದಲ್ಲಿ ಪ್ರವರ್ಗ –ಸಿ ಯ ಇತರೆ ಜಾತಿಗಳು.

| | | |
|---|---|---|
| 1 | ನೇಮಕಾತಿ ವಿಧಾನ | ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) ನಿಯಮಗಳು 1982 ಹಾಗೂ ತಿದ್ದುಪಡಿ ನಿಯಮಗಳು 2007 ಮತ್ತು 2021. |
| 2 | ಅರ್ಜಿಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸಬೇಕಾದ ಜಾಲತಾಣ | https://uttarakannada.dcourts.gov.in/notice-category/recruitments/ <br> **ಅಥವಾ** <br> https://uttarakannada.dcourts.gov.in/online-recruitment/ |
| 3 | ಅಭ್ಯರ್ಥಿಗಳು ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ದಿನಾಂಕ ಮತ್ತು ಶುಲ್ಕ | ಆನ್ ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಲುಃ **ಪ್ರಾರಂಭ ದಿನಾಂಕಃ17.08.2026 ರಿಂದ ಕೊನೆಯ ದಿನಾಂಕಃ16.09.2026 ರ ರಾತ್ರಿ 11.59 ಗಂಟೆಯೊಳಗಾಗಿ** |

| | | |
|---|---|---|
| | ಪಾವತಿಸಲು ಕೊನೆಯ ದಿನಾಂಕ | **ಶುಲ್ಕ ಪಾವತಿಸಲು ಕೊನೆಯ ದಿನಾಂಕಃ**<br>ಆನ್ ಲೈನ್ ಮೂಲಕ 17.09.2026 ರ ರಾತ್ರಿ 11.59 ಗಂಟೆಯೊಳಗಾಗಿ |
| 4 | ಪಾವತಿಸಬೇಕಾದ ಶುಲ್ಕ | 1. **ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ರೂ.300/-**<br>2. **ಪ್ರವರ್ಗ-II ಎ, ಪ್ರವರ್ಗ-II ಬಿ, ಪ್ರವರ್ಗ-III ಎ, ಪ್ರವರ್ಗ-III ಬಿ ಸೇರಿದ ಅಭ್ಯರ್ಥಿಗಳು ರೂ.150/-**<br>3. **ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-I ಹಾಗೂ ಎದ್ದು ಕಾಣುವ ಅಂಗವೈಕಲ್ಯವುಳ್ಳ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ.**<br><br>1) ಅಭ್ಯರ್ಥಿಗಳು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ಸೂಚಿಸಿದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಲೆಕ್ಟ್ ಪೇಜ್ ನಲ್ಲಿ ನೆಟ್ ಅಥವಾ ಇಂಟರ್ನೆಟ್ ಬ್ಯಾಂಕಿಂಗ್/ಡೆಬಿಟ್ ಕಾರ್ಡ್ /ಕ್ರೆಡಿಟ್ ಕಾರ್ಡ್ ಮೂಲಕ ಆನ್ ಲೈನ್ ಶುಲ್ಕ ಸಂದಾಯ ಮಾಡತಕ್ಕದ್ದು. **ಸೂಚನೆಃ**<br><br>1. **ಶುಲ್ಕವನ್ನು " ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರಕನ್ನಡ, ಕಾರವಾರ" ಇವರ ಹೆಸರಿಗೆ ಮಾತ್ರ ಪಾವತಿಸತಕ್ಕದ್ದು** ಹಾಗೂ ಬೇರೆ ಯಾವುದೇ ಹೆಸರಿನಲ್ಲಿ ಪಾವತಿಸಿದ ಶುಲ್ಕವನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಅರ್ಜಿಯು ತಿರಸ್ಕೃತಗೊಳ್ಳುತ್ತದೆ.<br>2. ಆನ್ ಲೈನ್ ಶುಲ್ಕ ಸಂದಾಯ ಹೊರತುಪಡಿಸಿ ಇನ್ಯಾವುದೇ ರೀತಿಯ ಅಂದರೆ ಡಿಮ್ಯಾಂಡ್ ಡ್ರಾಫ್ಟ್/ಪೋಸ್ಟಲ್ ಆರ್ಡರ್/ಮನಿ ಆರ್ಡರ್/ಚೆಕ್ / ನಗದು ಹಾಗೂ ಇನ್ನಿತರ ಯಾವುದೇ ನಮೂನೆಗಳಲ್ಲಿ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ.<br>3. ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಯಾವುದೇ ಕಾರಣಕ್ಕೂ /ಸಂದರ್ಭದಲ್ಲೂ ಹಿಂತಿರುಗಿಸಲಾಗುವುದಿಲ್ಲ.<br>4. ನಿಗದಿತ ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.<br>5. ಶುಲ್ಕ ಪಾವತಿಯಾಗಿರುವ ಬಗ್ಗೆ ಎಸ್.ಬಿ.ಐ. ಬ್ಯಾಂಕಿನೊಡನೆ ಮಾತ್ರ ಪರಿಶೀಲಿಸಿ ಖಚಿತ ಪಡಿಸಿಕೊಳ್ಳತಕ್ಕದ್ದು. ಶುಲ್ಕ ಪಾವತಿಸುವ |

| | | |
|---|---|---|
| | | ಪ್ರಕ್ರಿಯೆಯಲ್ಲಿ ಉಂಟಾಗುವ ವೈಪಲ್ಯಕ್ಕೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ. |
| 5 | **ವೇತನ ಶ್ರೇಣಿ** | |
| | ಆದೇಶ–ಜಾರಿಕಾರರು | ರೂ.31775-725-32500-800-35700-900-39300-1000-43300-1125-47800-1250-52800-1375-58300-1500-61300. |
| | ಜವಾನ | ರೂ.27000-650-29600-725-32500-800-35700-900-39300-1000-43300-1125-46675. |
| 6. | **ಶೈಕ್ಷಣಿಕ ವಿದ್ಯಾರ್ಹತೆ** | |
| | ಆದೇಶ–ಜಾರಿಕಾರರು | * ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.<br>* ಭಾರಿ / ಹಗುರ ವಾಹನ ಚಾಲನಾ ಅನುಜ್ಞಾನಪತ್ರ (Driving License–HMV/LMV) ಹೊಂದಿದವರಿಗೆ ಆದ್ಯತೆ ನೀಡಲಾಗುವುದು. |
| | ಜವಾನ | * ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಥವಾ ತತ್ಸಮಾನ ವಿದ್ಯಾರ್ಹತೆ.<br>* ಕನ್ನಡ ಓದಲು ಬರೆಯಲು ಬರಬೇಕು . |
| 7. | ವಯೋಮಿತಿ | ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು 18 ವರ್ಷ ಪೂರೈಸಿರಬೇಕು ಮತ್ತು ಗರಿಷ್ಟ ವಯಸ್ಸು ಈ ಕೆಳಕಂಡಂತಿರಬೇಕು.<br>1. ಸಾಮಾನ್ಯ ವರ್ಗದ ಅಭ್ಯರ್ಥಿಗಳು 40 ವರ್ಷ ಮೀರಿರಬಾರದು.<br>2. ಪ್ರವರ್ಗ–II(ಎ), ಪ್ರವರ್ಗ–II(ಬಿ) ಮತ್ತು ಪ್ರವರ್ಗ–III(ಎ), ಪ್ರವರ್ಗ–III(ಬಿ)ರ ಅಭ್ಯರ್ಥಿಗಳು 43 ವರ್ಷ ಮೀರಿರಬಾರದು.<br>3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ – I ರ ಅಭ್ಯರ್ಥಿಗಳು 45 ವರ್ಷ ಮೀರಿರಬಾರದು.<br>ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ) ನಿಯಮಗಳು, 1977 ನಿಯಮ 6(2) ನೇ ನಿಯಮದ ಅನುಸಾರ, ಈ ಕೆಳಗಿನ ಸಂದರ್ಭಗಳಲ್ಲಿ ಸದರಿ ನಿಯಮಗಳಲ್ಲಿ ನಿಗದಿಪಿಡಿಸಿರುವ ಗರಿಷ್ಟ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಸಡಿಲಿಕೆ ಮಾಡಲಾಗುವುದು.<br>(1) ಅಭ್ಯರ್ಥಿಯು ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಅಥವಾ ರಾಜ್ಯ ಅಥವಾ ಕೇಂದ್ರ ಅಧಿನಿಯಮದಡಿಯಲ್ಲಿ ಸರ್ಕಾರದ ಮೂಲಕ ಸ್ಥಾಪಿತವಾದ ಮತ್ತು ಸರ್ಕಾರದ ಅಧೀನದಲ್ಲಿ ಅಥವಾ |

| | | |
|---|---|---|
| | | ನಿಯಂತ್ರಣದಲ್ಲಿ ಇರುವ ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಕ್ಷದಲ್ಲಿ ಅಥವಾ ಯಾವುದೇ ಹುದ್ದೆಯನ್ನು ಹೊಂದಿದ್ದಲ್ಲಿ ಅವರು ಸಲ್ಲಿಸಿರುವ ಅವಧಿ ಅಥವಾ 10 ವರ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿ ಸಡಿಲಿಕೆಗೆ ಅರ್ಹರಾಗಿರುತ್ತಾರೆ.<br>(2) ಮಾಜಿ ಸೈನಿಕರಿಗೆ, ಕೇಂದ್ರ ಸಶಸ್ತ್ರ ಪಡೆಯಲ್ಲಿ ಅವರು ಸೇವೆ ಸಲ್ಲಿಸಿದ ಅವಧಿಯ ವರ್ಷಗಳ ಜೊತೆಗೆ 03 ವರ್ಷಗಳು ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.<br>(3) ಅಭ್ಯರ್ಥಿಯು ದೈಹಿಕ ಅಂಗವಿಕಲತೆ ಹೊಂದಿರುವ ಸಂದರ್ಭದಲ್ಲಿ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.<br>(4) ಅಭ್ಯರ್ಥಿಯು ವಿಧವೆಯಾಗಿರುವ ಸಂದರ್ಭದಲ್ಲಿ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.<br>**ಸೂಚನೆ 1.** ಕನಿಷ್ಟ ಮತ್ತು ಗರಿಷ್ಟ ವಯೋಮಿತಿಯು ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕವನ್ನು ಆಧರಿಸಿರುತ್ತದೆ.<br>**ಸೂಚನೆ 2.** ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಗರಿಷ್ಟ ವಯೋಮಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 262 ಸೇನೆನಿ 2025 ದಿನಾಂಕ 29.01.2026 ದಲ್ಲಿ ಆದೇಶಿಸಿರುವಂತೆ ಗರಿಷ್ಟ ವಯೋಮಿತಿಗೆ 05 ವರ್ಷಗಳ ಸಡಿಲಿಕೆಯನ್ನು ಸೇರಿಸಲಾಗಿರುತ್ತದೆ. ವಯೋಮಿತಿ ಸಡಿಲಿಕೆಯು ಈ ಒಂದು ಭಾರಿಗೆ ಮಾತ್ರ ಸೀಮಿತವಾಗಿದೆ. |
| 8. | **ಸೇವಾ ಪರಿವೀಕ್ಷಣಾ ಅವಧಿ** | ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ. |
| 9. | **ಸಂದರ್ಶನ** | |
| | ಆದೇಶ–ಜಾರಿಕಾರರು | ಅಭ್ಯರ್ಥಿಯು ಶೈಕ್ಷಣಿಕ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿರುವ ಶೇಕಡಾವಾರು ಅಂಕಗಳ ಆಧಾರದ ಮೇಲೆ 1 ಹುದ್ದೆಗೆ 25 ಅಭ್ಯರ್ಥಿಗಳಂತೆ (1:25 ರ ಅನುಪಾತದಲ್ಲಿ) ಅತೀ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಅಧಿಸೂಚಿಸಿರುವ ಹುದ್ದೆಗಳ ಮೀಸಲಾತಿಗನುಗುಣವಾಗಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ಒಟ್ಟು 10 ಅಂಕಗಳನ್ನು ನಿಗದಿಪಡಿಸಲಾಗಿದೆ. |
| | ಜವಾನ | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡಾ ಆಧಾರದ ಮೇಲೆ ಒಂದು ಹುದ್ದೆಗೆ 1:10 ಅನುಪಾತದಂತೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ |

| | | |
|---|---|---|
| | | ಕರೆಯಲಾಗುವುದು. ಸಂದರ್ಶನಕ್ಕೆ ಒಟ್ಟು 10 ಅಂಕಗಳನ್ನು ನಿಗದಿಪಡಿಸಲಾಗಿದೆ. |
| 10. | **ಆಯ್ಕೆ ವಿಧಾನ** | ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) ನಿಯಮಗಳು, 1982 ಹಾಗೂ ತಿದ್ದುಪಡಿ ನಿಯಮಗಳು 2007 ಮತ್ತು 2021. |
| | ಆದೇಶ–ಜಾರಿಕಾರರು | ಸಂದರ್ಶನದಲ್ಲಿ ಪಡೆಯುವ ಅಂಕಗಳ ಆಧಾರದ ಮೇಲೆ |
| | ಜವಾನ | ಸಂದರ್ಶನದಲ್ಲಿ ಪಡೆಯುವ ಅಂಕಗಳ ಆಧಾರದ ಮೇಲೆ |
| | | **ಸೂಚನೆಃ –** ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳ ಅಂಕಗಳು ಸಮವಾಗಿದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಅರ್ಹತೆಯ ಕ್ರಮವನ್ನು ಅವರ ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುತ್ತದೆ ಮತ್ತು ವಯಸ್ಸಿನಲ್ಲಿ ಹಿರಿಯ ವ್ಯಕ್ತಿಯನ್ನು ಅರ್ಹತೆಯ ಕ್ರಮದಲ್ಲಿ ಮೇಲೆ ಇರಿಸಲಾಗುತ್ತದೆ |
| 11. | **ಮೀಸಲಾತಿ ಕೋರುವ ಅಭ್ಯರ್ಥಿಗಳಿಗೆ ಸೂಚನೆ** | |
| | i) ಜಾತಿ ಪ್ರಮಾಣ ಪತ್ರ | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–II(ಎ), ಪ್ರವರ್ಗ–11 ಬಿ, ಪ್ರವರ್ಗ–III–(ಎ), ಮತ್ತು ಪ್ರವರ್ಗ–III–ಬಿ) ಪ್ರವರ್ಗಗಳಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿರುವ ಮಾನ್ಯವಿರುವ ಪ್ರಮಾಣಪತ್ರವನ್ನು ಆನ್ ಲೈನ್ ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರು ಪಡಿಸತಕ್ಕದ್ದು. |
| | ii)ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ | ಎದ್ದು ಕಾಣುವ ಅಂಗವೈಕಲ್ಯವುಳ್ಳ ವ್ಯಕ್ತಿ ಪ್ರವರ್ಗದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣಪತ್ರವನ್ನು ಆನ್ ಲೈನ್ ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೇ ಹಾಜರುಪಡಿಸತಕ್ಕದ್ದು. |
| | Iii) ಮಾಜಿ ಸೈನಿಕ | ಮಾಜಿ ಸೈನಿಕ ಪ್ರವರ್ಗದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಮಿಲಿಟರಿ ಸೇವೆಯಿಂದ ಬಿಡುಗಡೆ ಮಾಡಲಾದ ಅಥವಾ ವಿಮುಕ್ತಿಗೊಳಿಸಿದ ಪ್ರಮಾಣಪತ್ರವನ್ನು ಆಯಾ ಜಿಲ್ಲಾ ಸೈನಿಕ ಬೋರ್ಡ ಅಥವಾ ಸಕ್ಷಮ ಪ್ರಾಧಿಕಾರದಿಂದ ಪಡೆದು ಆನ್ ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ |

| | | |
|---|---|---|
| | | ತಪ್ಪದೇ ಹಾಜರುಪಡಿತಕ್ಕದ್ದು. |
| | iv) ಗ್ರಾಮೀಣ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ ಪ್ರವರ್ಗದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿರುವ ಮಾನ್ಯವಿರುವ ಪ್ರಮಾಣಪತ್ರವನ್ನು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು.<br>** ಗ್ರಾಮೀಣ ಅಭ್ಯರ್ಥಿ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವಂತಹ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮೆಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿರುವ ಮಾನ್ಯವಿರುವ ಕೆನೆ ಪದರ ಪ್ರಮಾಣಪತ್ರ, ಜಾತಿ ಪ್ರಮಾಣಪತ್ರ, ಹಾಗೂ ಗ್ರಾಮೀಣ ಅಭ್ಯರ್ಥಿ ಪ್ರಮಾಣಪತ್ರವನ್ನು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು. |
| | v) ತೃತೀಯ ಲಿಂಗ | ತೃತೀಯ ಲಿಂಗ ಪ್ರವರ್ಗದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣಪತ್ರವನ್ನು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರುಪಡಿಸತಕ್ಕದ್ದು. (Section 6 of the Transgender Persons (Protection of Rights) Act, 2019). |
| | vi) ಸರ್ಕಾರಿ ನೌಕರ (ರಾಜ್ಯ / ಕೇಂದ್ರ / ಸಾರ್ವಜನಿಕ ಉದ್ದಿಮೆ) | ಸರ್ಕಾರಿ ನೌಕರ (ರಾಜ್ಯ / ಕೇಂದ್ರ / ಸಾರ್ವಜನಿಕ ಉದ್ದಿಮೆ) ಪ್ರವರ್ಗದಡಿಯಲ್ಲಿ ಮಿಸಲಾತಿ ಕೋರುವ ಅಭ್ಯರ್ಥಿಗಳು ಹುದ್ದೆಗೆ ಆಯ್ಕೆಯಾದ ಸಂದರ್ಭದಲ್ಲಿ ತಾವು ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆಯಿಂದ ನಿರಪೇಕ್ಷಣಾ ಪತ್ರವನ್ನು ಪಡೆದು ಹಾಜರುಪಡಿಸತಕ್ಕದ್ದು. |
| | vii) ಯೋಜನಾ ನಿರಾಶ್ರಿತ | ಯೋಜನಾ ನಿರಾಶ್ರಿತರು ಪ್ರವರ್ಗದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸ 23 ಸೆನೆನಿ 99, ದಿನಾಂಕಃ 23.11.2000 ರನ್ವಯ ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರವನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಸದರಿ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು. |

| | | |
|---|---|---|
| 12 | **ದಾಖಲೆಗಳ ಪರಿಶೀಲನೆ** | **ಶೈಕ್ಷಣಿಕ ವಿದ್ಯಾರ್ಹತೆ –** ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಮೂಲ ಅಂಕಪಟ್ಟಿಯನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಪ್ರಾಧಿಕಾರದ ಮುಂದೆ ಹಾಜರು ಪಡಿಸತಕ್ಕದ್ದು.<br><br>**ಜನ್ಮ ದಿನಾಂಕ –** ಅಭ್ಯರ್ಥಿಯು ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ ಅಥವಾ ಮೂಲ ಜನನ ಪ್ರಮಾಣ ಪತ್ರವನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಪ್ರಾಧಿಕಾರದ ಮುದೆ ಹಾಜರುಪಡಿಸತಕ್ಕದ್ದು.<br><br>**ಮಿಸಲಾತಿ ಕೋಡುವ ಮಾನ್ಯವಿರುವ ಮೂಲ ಪ್ರಮಾಣ ಪತ್ರಗಳನ್ನು** ಅಭ್ಯರ್ಥಿಯು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಪ್ರಾಧಿಕಾರದ ಮುಂದೆ ಹಾಜರುಪಡಿಸತಕ್ಕದ್ದು.<br><br>**ಗುರುತಿನ ಪುರಾವೆ:** ಅಭ್ಯರ್ಥಿಯು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಗುರುತಿನ ಪುರಾವೆಯಾಗಿ ಮೂಲ ಆಧಾರ್ ಕಾರ್ಡ, ಚುನಾವಣಾ ಗುರುತಿನ ಚೀಟಿ ಇತರೆ ದಾಖಲೆಗಳನ್ನು ಪ್ರಾಧಿಕಾರದ ಮುಂದೆ ಹಾಜರುಪಡಿಸತಕ್ಕದ್ದು. |
| 13 | **ನಡತೆ ಪ್ರಮಾಣಪತ್ರ** | ಅಭ್ಯರ್ಥಿಯು ಉತ್ತಮ ನಡತೆಯ ಬಗ್ಗೆ ಶಾಲೆ / ಕಾಲೇಜಿಗೆ ಸಂಬಂಧಿಸದ ತನಗೆ ಚನ್ನಾಗಿ ಪರಿಚಯವಿರುವ ಹಾಗೂ ಸಂಬಂಧಿಯಾಗಿರದ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಸಹಿ ಮತ್ತು ಮೊಹರು ಒಳಗೊಂಡಂತೆ ಎರಡು ಹಾಗೂ ತಾನು ಕೊನೆಯದಾಗಿ ಓದಿದ ಸಂಸ್ಥೆ / ಕಾಲೇಜಿನ ಪ್ರಾಂಶುಪಾಲರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಸಹಿ ಮತ್ತು ಮೊಹರು ಒಳಗೊಂಡಂತೆ ಪಡೆದ ಒಂದು ನಡತೆ ಪ್ರಮಾಣ ಪತ್ರವನ್ನು ಒಟ್ಟು ಆರು ತಿಂಗಳ ಅವಧಿ ಮೀರದ ಹಾಗೆ ಪಡೆದು ಪ್ರಾಧಿಕಾರವು ನಿರ್ದೇಶಿಸಿದಾಗ ಹಾಜರುಪಡಿಸತಕ್ಕದ್ದು. |
| 14 | **ಸಾಮಾನ್ಯ ಸೂಚನೆಗಳು** | * ಆನ್ ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ಆನ್ ಲೈನ್ ಪೋರ್ಟಲ್ ನಲ್ಲಿ ನೀಡಿರುವ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಓದಿ ಅನುಸರಿಸಬೇಕು. ಅಪೂರ್ಣ ಅರ್ಜಿಗಳನ್ನು ಯಾವುದೇ ಪತ್ರವ್ಯವಹಾರಕ್ಕೆ ಅವಕಾಶವಿಲ್ಲದೆ ತಿರಸ್ಕರಿಸಲಾಗುವುದು.<br>* ಅಭ್ಯರ್ಥಿಯು ಸರಿಯಾದ ಇ–ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು. ತಪ್ಪಾದ ಇ–ಮೇಲ್ ವಿಳಾಸ |

| | | |
|---|---|---|
| | | ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸಿದಲ್ಲಿ ತಿದ್ದುಪಡಿಗೆ ಅವಕಾಶವಿರುವುದಿಲ್ಲ.<br>* ಪ್ರಾಧಿಕಾರದಿಂದ ನೀಡುವ ಸೂಚನೆ / ಯಾವುದೇ ಮಾಹಿತಿಯನ್ನು ಅಭ್ಯರ್ಥಿಗಳು ಆನ್ ಲೈನ್ ಅರ್ಜಿಯಲ್ಲಿ ನಮೂದಿಸಿರುವ ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಗೆ ತಿಳಿಸಲಾಗುವುದು. ಒಂದು ವೇಳೆ ಅಭ್ಯರ್ಥಿಗಳಿಗೆ ಇಮೇಲ್ ಅಥವಾ ಸಂದೇಶ ತಲುಪದಿದ್ದಲ್ಲಿ ಈ ನೇಮಕಾತಿ ಪ್ರಾಧಿಕಾರವು ಹೊಣೆಯಾಗಿರುವುದಿಲ್ಲ.<br>* ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಹಂತದಲ್ಲಿ ಅಗತ್ಯಪಡಿಸಿರುವ ದಾಖಲೆಗಳನ್ನು /ಪ್ರಮಾಣ ಪತ್ರಗಳನ್ನು ಅಪ್‌ಲೋಡ್ ಮಾಡಬೇಕು.<br>* ಅರ್ಹತಾ ಪರೀಕ್ಷೆಗೆ / ಮೌಖಿಕ ಸಂದರ್ಶನಕ್ಕೆ ಈ ಕಛೇರಿಯು ನಿಗದಿಪಡಿಸುವ ಜಾಗಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.<br>* ಅಭ್ಯರ್ಥಿಗಳು ಆಯ್ಕೆ ಪ್ರಕ್ರಿಯೆಯ ಸಂದರ್ಭದಲ್ಲಿ ಸಿಬ್ಬಂದಿ ಅಥವಾ ಸಿಬ್ಬಂದಿಯೇತರ ಮೂಲಗಳ ಮೂಲಕ ಯಾವುದೇ ರೀತಿಯ ಬಾಹ್ಯ ಬೆಂಬಲವನ್ನು ಪಡೆಯುವ ಪ್ರಯತ್ನ ಮಾಡಿದಲ್ಲಿ ಅಂತಹ ಅಭ್ಯರ್ಥಿಗಳ ನೇಮಕಾತಿಯನ್ನು / ಅಭ್ಯರ್ಥಿಕೆಯನ್ನು ಅನರ್ಹಗೊಳಿಸಲಾಗುವುದು.<br>* ಪರಿಶೀಲನೆಯ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ ಆತನ/ಆಕೆಯ ಅಭ್ಯರ್ಥಿಕೆಯು ರದ್ದಾಗುತ್ತದೆ ಮತ್ತು ಅವರ ವಿರುದ್ಧ ತಪ್ಪು ಮಾಹಿತಿ ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ವ್ಯವಹರಣೆಯನ್ನು ಜರುಗಿಸಲಾಗುವುದು.<br>* ಅಭ್ಯರ್ಥಿಯು ನಿಗದಿಪಡಿಸಿರುವ ಶುಲ್ಕವನ್ನು ಪಾವತಿ ಮಾಡಿದ ರಶೀದಿಯನ್ನು ತಪ್ಪದೇ ಅಪ್ ಲೋಡ್ ಮಾಡಬೇಕು.<br>* ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಆನ್ ಲೈನ್ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಭ್ಯರ್ಥಿಯು ಕಡೆಯದಾಗಿ ಸಲ್ಲಿಸಿದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು. ಕೊನೆಯ ಅರ್ಜಿಯನ್ನು ಬಿಟ್ಟು ಬೇರೆ ಯಾವುದೇ ಅರ್ಜಿ ಪರಿಗಣಿಸಲು, ಸಲ್ಲಿಸುವ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ. |

| | | |
|---|---|---|
| 15. | **ಅರ್ಜಿಯ ನಿರಾಕರಣೆ ಮತ್ತು ಕ್ರಿಮಿನಲ್ ಮೊಕದ್ದಮೆ** | ಪರಿಶೀಲನೆಯ ಯಾವುದೇ ಸಮಯದಲ್ಲಿ ಅಥವಾ ನೇಮಕಾತಿಯ ಯಾವುದೇ ಹಂತದಲ್ಲಿ, ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿದ ಮಾಹಿತಿಯು ಸುಳ್ಳು ಎಂದು ಕಂಡುಬಂದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ವಸ್ತುನಿಷ್ಟ ಸತ್ಯಗಳನ್ನು ತಿರುಚಿದರೆ ಅಥವಾ ಮೊಟಕುಗೊಳಿಸಿದರೆ ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ. ನೇಮಕಾತಿಯ ನಂತರವೂ ಅಂತಹ ಯಾವುದೇ ನ್ಯೂನತೆಗಳು ಕಂಡುಬಂದರೆ, ಅಭ್ಯರ್ಥಿಯ ನೇಮಕಾತಿಯನ್ನು ಕೊನೆಗೊಳಿಸಲಾಗುವುದು. ತಪ್ಪು ಅಪೂರ್ಣ ಅಥವಾ ತಪ್ಪಾದ ಮಾಹಿತಿಯನ್ನು ಒದಗಿಸುವುದು ಅಭ್ಯರ್ಥಿಯ ಅನರ್ಹತೆಗೆ ಕಾರಣವಾಗುವುದಲ್ಲದೆ ಅಂತಹ ಮಾಹಿತಿಯನ್ನು ಒದಗಿಸಿದ್ದಕ್ಕಾಗಿ ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರರಾಗುತ್ತಾರೆ. |
| ಸೂಚನೆ – ಈ ನೇಮಕಾತಿಯು ರಿಟ್ ಅರ್ಜಿ ಸಂಖ್ಯೆ200448/2025, 17968/2025, 3145/2023 ಪ್ರಕರಣಗಳಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ. | | |

B. Paramesh 5/8/26

**ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ,**

**ಉತ್ತರ ಕನ್ನಡ, ಕಾರವಾರ.**

**<u>ಪ್ರತಿಯನ್ನುಃ–</u>**

ಮಹಾ ವಿಲೇಖನಾಧಿಕಾರಿಗಳು, ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

**ಪ್ರತಿಯನ್ನು ಮಾಹಿತಿಗಾಗಿಃ–**

1. ರಾಜ್ಯದ ಎಲ್ಲಾ ಜಿಲ್ಲೆಗಳ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳಿಗೆ ತಮ್ಮ ನ್ಯಾಯಾಲಯಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿ.
2. ಉತ್ತರ ಕನ್ನಡ ಕಾರವಾರ ಜಿಲ್ಲಾ ಘಟಕದ ಎಲ್ಲಾ ಅಧೀನ ನ್ಯಾಯಾಲಯಗಳ ಸೂಚನಾ ಫಲಕಗಳಲ್ಲಿ ಪ್ರಕಟಣೆಗಾಗಿ .ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ರಾಜ್ಯದ ಎರಡು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಣೆಗಾಗಿ..

3. ಆಯುಕ್ತರು, ವಾರ್ತಾ ಇಲಾಖೆ, ನಂ. 17, ಭಗವಾನ್ ಮಹಾವೀರ್ ಜೈನ್, (ಇನ್‌ಫೆಂಟ್ರಿ) ರಸ್ತೆ, ಬೆಂಗಳೂರು-560 001 - ಇವರಿಗೆ ಪ್ರಾದೇಶಿಕ ದಿನಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರಕ್ಕಾಗಿ ಪ್ರಕಟಿಸಲು ಕೋರಿ (ದ್ವಿಪ್ರತಿಯಲ್ಲಿ).

4. ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ಸರ್ಕಾರಿ ಹೊರವಲಯ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು-ರಾಜ್ಯ ಪತ್ರದಲ್ಲಿ ಪ್ರಕಟಿಸಿ ಒಂದು ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ಕೋರಿದೆ..

5. ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ.

6. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ಕಾರವಾರ ಇವರಿಗೆ ವ್ಯಾಪಕ ಪ್ರಚಾರಕ್ಕಾಗಿ.

7. ನೋಡಲ್ ಅಧಿಕಾರಿ (ಇ-ಗೆಜೆಟ್)/ಹಿರಿಯ ಶಿರಸ್ತೇದಾರರು, ನಗದು ವಿಭಾಗ, ಜಿಲ್ಲಾ ನ್ಯಾಯಾಲಯ, ಕಾರವಾರ ಇವರಿಗೆ ಕರ್ನಾಟಕ ಇ-ರಾಜ್ಯ ಪತ್ರ ಜಾಲತಾಣದಲ್ಲಿ ಪ್ರಕಟಿಸಲು ನಿರ್ದೇಶಿಸಲಾಗಿದೆ.

8. ಜಿಲ್ಲಾ ನ್ಯಾಯಾಲಯದ ಸೂಚನಾ ಫಲಕಕ್ಕೆ

9. ಜಿಲ್ಲಾ ಗ್ರಂಥಾಲಯ, ಕಾರವಾರ ಸೂಚನಾ ಫಲಕಕ್ಕೆ

10. ಕಾರವಾರ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಸೂಚನಾ ಫಲಕಕ್ಕೆ

11. ತಂತ್ರಾಂಶ ತಂತ್ರಜ್ಞರು, ಕಂಪ್ಯೂಟರ ವಿಭಾಗ, ಜಿಲ್ಲಾ ನ್ಯಾಯಾಲಯ, ಕಾರವಾರ ಇವರಿಗೆ ಜಿಲ್ಲಾ ನ್ಯಾಯಾಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲು ಹಾಗೂ ಗೌರವಾನ್ವಿತ ಉಚ್ಚನ್ಯಾಯಾಲಯದ ಕಂಪ್ಯೂಟರ್ ವಿಭಾಗದ ಸಹಕಾರದೊಂದಿಗೆ ಆನ್‌ಲೈನ್ ಅಧಿಸೂಚನೆಯ ಕಾರ್ಯಗಳು ಪೂರ್ಣಗೊಳ್ಳುವವರೆಗೂ ತಾಂತ್ರಿಕ ನೆರವನ್ನು ನೀಡಲು ನಿರ್ದೇಶಿಸಲಾಗಿದೆ.

B. Paramesh 5/8/26

**ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,**

**ಉತ್ತರ ಕನ್ನಡ , ಕಾರವಾರ**